## ಪ್ರಧಾನ ಸಿವಿಲ್ ಜೆಡ್ಜ್ ಮತ್ತು ಜೆಎಮ್‌ಎಫ್ ಸಿ ನ್ಯಾಯಾಲಯ, ಕೆ. ಆರ್. ನಗರ

**ಸಿಸಿ - 2/2015**

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಶೋಭ | ಸಿಡಬ್ಲ್ಯೂ 4 |
| ಗಂಡನ ಹೆಸರು | - | ಬಸವರಾಜು | ಪಿಡಬ್ಲ್ಯೂ 4 |
| ವಯಸ್ಸು | - | 40 ವರ್ಷ | |
| ಕೆಲಸ | - | ಗೃಹಿಣಿ | ಸಾ.ಪ್ರ.ಬೋ |
| ವಾಸ | - | ಅಂಕನಹಳ್ಳಿ | ದಿ. 19.06.2018 |

ಮುಖ್ಯ ವಿಚಾರಣೆ ಮಾನ್ಯ ಎಪಿಪಿಯವರಿಂದ

1) ಚಾಸಾ 1 ನನ್ನ ಅಣ್ಣ. ಚಾಸಾ 2 ಮತ್ತು 3 ನನ್ನ ಅತ್ತಿಗೆಯರು. ದಿನಾಂಕಃ 20-10-2014 ರಂದು ಬೆಳಿಗ್ಗೆ 7.30 ಗಂಟೆಗೆ ನಾನು ಮನೆಯ ಹತ್ತಿರ ಇರುವಾಗ ಚಾಸಾ 1 ನಮ್ಮ ಮನೆಯ ಹತ್ತಿರ ಕುಂಬಳಕಾಯಿ ಯಾರೋ ಕಿತ್ತುಕೊಂಡು ಹೋಗಿರುತ್ತಾರೆ ಎಂದು ಮಾತನಾಡುತ್ತಿರುವಾಗ ಆರೋಪಿತರೆಲ್ಲರೂ ಸಹ ಗುಂಪು ಕಟ್ಟಿಕೊಂಡು ಬಂದು ನಮ್ಮನ್ನೆ ಬೈಯುತ್ತಿದ್ದೀರಾ ಎಂದು ಗಲಾಟೆ ಮಾಡಿರುತ್ತಾರೆ. ಚಾಸಾ 3 ರವರಿಗೆ ಸತ್ಯ, ರಂಗಸ್ವಾಮಿ ಹೊಡೆದು ಕೆಳಗೆ ಬೀಳಿಸಿರುತ್ತಾರೆ. ಇತರೆ ಆರೋಪಿಗಳೆಲ್ಲರೂ ಹೊಡೆದಿರುತ್ತಾರೆ. ಅಷ್ಟರಲ್ಲಿ ನಾನು, ಚಾಸಾ 5 ಹೋಗಿ ಜಗಳ ಬಿಡಿಸಿರುತ್ತೇವೆ. ಚಾಸಾ 3 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುವಷ್ಟು ಗಾಯವಾಗಿರುವುದಿಲ್ಲ.

ಈ ಹಂತದಲ್ಲಿ ಶ್ರೀ ಎಪಿಪಿಯವರು ಸಾಕ್ಷಿಯನ್ನು ಬಾಗಶಹ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು.

ಪಾಟೀ ಸವಾಲು ಶ್ರೀ ಎಪಿಪಿಯವರಿಂದ -

2) ಚಾಸಾ 1 ರವರ ಮನೆಗೆ ಜಾನಕಿ, ಸಣ್ಣಯ್ಯ, ಜಯಮ್ಮ, ಮಣಿ ನುಗ್ಗಿ ಅತಿಕ್ರಮ ಪ್ರವೇಶ ಮಾಡಿರುತ್ತಾರೆ ಎಂದರೆ ನಿಜ. ಆಗ ರಂಗಸ್ವಾಮಿ, ಪುನೀತ, ಸತ್ಯ, ಶಾಂತ ಎಂಬುವವರು ಬೋಳಿಮಗನೆ, ಲೋಫರ್ ನನ್ನ ಮಗನೇ ಎಂದು ಅವಾಚ್ಯ ಶಬ್ದಗಳಿಂದ ಬೈದು ಕೊಲೆ ಬೆದರಿಕೆ ಹಾಕಿರುತ್ತಾರೆ ಎಂದರೆ ನಿಜ. ಚಾಸಾ 3 ರವರಿಗೆ ಪಲ್ಲವಿ ಮತ್ತು ಆಶಾ ಕೈಯಿಂದ ಹೊಡೆದು ನೋವುಂಟು ಮಾಡಿರುತ್ತಾರೆ ಎಂದರೆ ನಿಜ. ನ್ಯಾಯಾಲಯದ ಮುಂದಿರುವ ಆರೋಪಿತರನ್ನು ಸಾಕ್ಷಿ ನೋಡಿ ಗುರ್ತಿಸಿರುತ್ತಾರೆ.

ಪಾಟೀ ಸವಾಲು - ಆರೋಪಿ ಪರ ವಕೀಲರು ಗೈರು ಹಾಜರಾಗಿದ್ದು, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ ಎಂ ಒ

(ಶ್ರೀನಾಥ್ ಕೆ.)
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ